ಚಾಮರಾಜನಗರ ಜಿಲ್ಲೆಯಲ್ಲಿ ವಿದ್ಯುತ್ ತಗಲಿ ಆನೆಗಳು ಸಾಯುತ್ತಿರುವುದನ್ನು ತಡೆಯುವುದು.

1505 (2321)

ಶ್ರೀ ಸಿ.ಗುರುಸ್ವಾಮಿ (ಚಾಮರಾಜನಗರ): ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ಕಳೆದ ಒಂದು ವರ್ಷದಲ್ಲಿ ಚಾಮರಾಜನಗರ ಜಿಲ್ಲೆಯಲ್ಲಿ ವಿದ್ಯುತ್‌ತಂತಿ ತಗುಲಿ ಸತ್ತ ಆನೆಗಳ ಸಂಖ್ಯೆ ಎಷ್ಟು?

ಆ. ಈ ಆನೆಗಳ ಹತ್ಯೆಯನ್ನು ತಡೆಗಟ್ಟಲು ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಕೆ.ಎಚ್.ರಂಗನಾಥ್ (ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು):

ಅ. 6(ಆರು) ಆನೆಗಳು.

ಆ. 1. ಆನೆಗಳ ಹತ್ಯೆಯನ್ನು ತಡೆಗಟ್ಟಲು ಆನೆಕಂದಕ ನಿರ್ಮಾಣ ಮಾಡಲಾಗುತ್ತಿದೆ.

2. ಸೌರಶಕ್ತಿ ಚಾಲಿತ ವಿದ್ಯುತ್‌ಬೇಲಿಯನ್ನು ನಿರ್ಮಿಸಲಾಗಿದೆ.

3. ಅರಣ್ಯದ ಅಂಚಿನಲ್ಲಿ ಬರುವ ಗ್ರಾಮಸ್ಥರಿಗೆ ಅನಧಿಕೃತ ವಿದ್ಯುತ್ ಹರಿಸಿ ವನ್ಯಜೀವಿಗಳನ್ನು ಕೊಲ್ಲದಂತೆ ಇಲಾಖಾ ಸಿಬ್ಬಂದಿ ವರ್ಗದ ಮೂಲಕ ಮನವರಿಕೆ ಮಾಡುವ ಪ್ರಯತ್ನ ಕೈಗೊಳ್ಳಲಾಗಿದೆ.

4. ಉದ್ಯಾನವನ ಅಭಯಾರಣ್ಯ ಹಾಗೂ ಇದರ ಹೊರಗಡೆ ಬರುವ ಯಾವುದೇ ಕೃಷಿ ಭೂಮಿಯಲ್ಲಿ ಅನಧಿಕೃತ ವಿದ್ಯುತ್ ಸಂಪರ್ಕ ಹೊಂದದಂತೆ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ಮತ್ತು ಅರಣ್ಯ ಇಲಾಖೆ ಪರಿಶೀಲನೆ ನಡೆಸುವ ಜಂಟಿ ಕಾರ್ಯಕೈಗೊಳ್ಳಲಾಗಿದೆ.

ಜಾನುವಾರುಗಳಿಗಾಗಿ ಖರೀದಿಸಿದ ಔಷಧ ಸಾಮಗ್ರಿ.

1506 (2167)

ಶ್ರೀ ಗುರುಸ್ವಾಮಿ ಎ.ಎಸ್(ಚಾಮುಂಡೇಶ್ವರಿ): ಮಾನ್ಯ ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?